ಇಚ್ಛೆಪಡುತ್ತೇನೆ. ಆದಷ್ಟು ಬೇಗೆ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು ಮತ್ತು ಗಡಿಲಿಂಗದಳ್ಳಿ ಗ್ರಾಮದ ಪುನರ್‌ವಸತಿ ಕೇಂದ್ರದಲ್ಲಿ ಕೆಲಸ ನಿಂತುಹೋಗಿದೆ. ಅಲ್ಲಿ ಯಾವ ಪ್ರಗತಿಯಾಗಿಲ್ಲ. ರೋಡ್ ಆಗಿಲ್ಲ ಮತ್ತು ಸಾರ್ವಜನಿಕ ಸೌಲಭ್ಯಗಳಾದ ಸ್ಕೂಲ್ ಈ ರೀತಿಯಾದ ಯಾವುದೇ ಕೆಲಸ ಅಲ್ಲಿ ಆಗಿಲ್ಲ. ಆದುದರಿಂದ ಈ ಗ್ರಾಮ ಪುನರ್‌ವಸತಿಯಾಗುವುದಕ್ಕೆ ಕಷ್ಟವಾಗಿದೆ. ಎರಡು ಪುನರ್‌ವಸತಿ ಕೇಂದ್ರ ಒಂದೇ ಗ್ರಾಮಕ್ಕೆ ಬರುತ್ತದೆ. ಅದಕ್ಕೆ ಮೂರನೇ ಪುನರ್ವಸತಿ ಕೇಂದ್ರದ ಆವಶ್ಯಕತೆ ಇದೆ ಎನ್ನುವುದನ್ನು ಅಲ್ಲಿನ ಅಧಿಕಾರಿಗಳಿಗೂ ಮನದಟ್ಟು ಮಾಡಿಕೊಟ್ಟಿದ್ದೇವೆ. ಅದರ ಬಗ್ಗೆ ಕೂಡ ಯಾವ ಕ್ರಮ ತೆಗೆದುಕೊಂಡಿಲ್ಲ. ಆದುದರಿಂದ ಮಾನ್ಯ ನೀರಾವರಿ ಸಚಿವರು ಇದರ ಬಗ್ಗೆ ತೀವ್ರವಾಗಿ ಗಮನಹರಿಸಿ ಕಾರ್ಯೋನ್ಮುಖರಾಗಬೇಕೆಂದು ತಿಳಿಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಲೋಯರ್ ಮುಲ್ಲಾಮಾರಿ ಯೋಜನೆಯಲ್ಲಿ ಮುಳುಗಡೆಯಾಗತಕ್ಕಂಥ ಹಳ್ಳಿಗಳಿಗೆ ಪುನರ್‌ವಸತಿ ಕೆಲಸ ನಿಧಾನವಾಗಿದ್ದು ನಿಜ. ಇದಕ್ಕೆ ಪುನರ್ವಸತಿ ಸಮಿತಿಯನ್ನು ಸಹ ನಾವು ನೇಮಿಸಬೇಕಾಗಿತ್ತು, ಅದು ಕೆಲಸ ಮಾಡುತ್ತಿಲ್ಲ, ಈಗ ಅದನ್ನು ಪುನರಚಿಸಿ ಅದರಲ್ಲಿ ಸಂಬಧಪಟ್ಟರತಕ್ಕಂಥ ಆ ಕ್ಷೇತ್ರದ ಶಾಸಕು ಹಾಗೂ ಪಾರ್ಲಿಮೆಂಟರಿ ಸದಸ್ಯರು ಸಹ ಅದರಲ್ಲಿ ಇರುತ್ತಾರೆ. ತಾವೇನು ಪುನರ್ವಸತಿ ಸಮಿತಿ ಶಿಫಾರಸ್ಸು ಕಳುಹಿಸಿಕೊಟ್ಟಿದ್ದೀರಿ, ಅದರ ಮೇಲೆ ನಾವು ಕಾರ್ಯಕ್ರಮಗಳನ್ನು ಜರುಗಿಸುತ್ತೇವೆ. ಇನ್ನೊಂದು ತಿಂಗಳೊಳಗಾಗಿ ಪುನರ್ವಸತಿ ಸಮಿತಿಯನ್ನು ನೇಮಕ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಸಂಖ್ಯೆ :227 (2514)ಕ್ಕೆ ಉತ್ತರ ಬಂದಿಲ್ಲ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರಗಳನ್ನು ಸದಸ್ಯರಿಗೆ ಕಳುಹಿಸಿಕೊಟ್ಟಿದ್ದೀರಾ?

ಶ್ರೀ ಬಾಬುರಾವ್ ಚಿಂಚನನೂರ್ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದೆ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಆಫೀಸಿನಲ್ಲಿ ಎಲ್ಲಾ ಹುಡುಕಿಸಿದೆ.

ಅಧ್ಯಕ್ಷರು : ಈ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದುಕೊಳ್ಳೋಣ.

ಸಕಲೇಶಪುರ ತಾಲ್ಲೂಕು ಬ್ಯಾಕರವಳ್ಳಿ ಅನೆಮಹಲ್‌ರಸ್ತೆ ಹೇಮಾವತಿ ಪ್ರಾಜೆಕ್ಟ್ ಅಡಿಯಲ್ಲಿ ಕೆಲಸ ಮಾಡಿರುವ ಬಗ್ಗೆ

231 (2526) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

A)ಸಕಲೇಶಪುರ ತಾಲ್ಲೂಕು ಬ್ಯಾಕರವಳ್ಳಿ ಅನೆ ಮಹಲ್ ರಸ್ತೆ, ಹೇಮಾವತಿ ಪ್ರಾಜೆಕ್ಟ್ ಅಡಿಯಲ್ಲಿ ಕೆಲಸ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

B)ಇದಕ್ಕೆ ಮಂಜೂರಾದ ಹಣವೆಷ್ಟು;

C)ಇದುವರೆಗೆ ಖರ್ಚಾಗಿರುವ ಹಣವೆಷ್ಟು;

D)ಈ ಕೆಲಸ ಸಂಪೂರ್ಣ ಕಳಪೆಯಾಗಿದೆ ಎಂದು ದೂರು ಬಂದಿದೆಯೆ?

E)ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮ ವೇನು?

ಶ್ರೀ ಎಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

A)ಸರ್ಕಾರದ ಗಮನಕ್ಕೆ ಬಂದಿದೆ.

B)54, 36 ಲಕ್ಷ ರೂಗಳು.

C)48.29 ಲಕ್ಷ ರೂಗಳು ವೆಚ್ಚವಾಗಿರುತ್ತದೆ.

D)ಬಂದಿಲ್ಲ.

E)ಉದ್ಭವಿಸುವುದಿಲ್ಲ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ 54 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ರಸ್ತೆ ಕೆಲಸ ಪ್ರಾರಂಭವಾಗಿದೆ; ಇಲ್ಲಿ ಆಗಿರುವಂತಹ ಕೆಲಸ ಕಳಪೆಯಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದಕ್ಕೆ ಉತ್ತರದಲ್ಲಿ ಬಂದಿಲ್ಲವೆಂದು ತಿಳಿಸಿದ್ದಾರೆ. ಗಮನಕ್ಕೆ ಬಂದಿದ್ದರೆ ಕೈಗೊಂಡ ಕ್ರಮವೇನು ಎಂದು ಪ್ರಶ್ನೆ ಕೇಳಿದರೆ ಉತ್ತರದಲ್ಲಿ ಉದ್ಭವಿಸುವುದಿಲ್ಲವೆಂದು ತಿಳಿಸಿದ್ದಾರೆ. ತುಂಬಾ ವಿಚಿತ್ರವಾಗಿ ರತಕ್ಕಂಥ ಉತ್ತರಗಳನ್ನು ಮಾನ್ಯ ಮಂತ್ರಿಗಳಿಂದ ಅಧಿಕಾರಿಗಳು ಕೊಡಿಸಿದ್ದಾರೆ. ಹಿಂದೆ ಕರ್ನಾಟಕದಲ್ಲಿ ಶರಾವತಿ ಕರ್ಮಕಾಡ ಎಂದು ಏನು ಪ್ರಸಿದ್ಧಿ ಆಯಿತು. ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಇದು ಹೇಮವತಿ ಕರ್ಮಕಾಂಡ. ದಿನಾಂಕ 25.5.1998ರಲ್ಲಿ ನಾನು ಅಲ್ಲಿನ ಮುಖ್ಯ ಇಂಜಿನಿಯರ್ ಅವರಿಗೆ ನಾನು ಪತ್ರ ಬರೆದು, ಈ ರಸ್ತೆ ಕೆಲಸ ತುಂಬಾ ಕಳಪೆಯಾಗಿದೆ, ರಸ್ತೆಯೆಲ್ಲಾ ಹಾಳಾಗುತ್ತಿದೆ, ತಕ್ಷಣ ಬಂದು ಇದನ್ನು ಸರಿಪಡಿಸಿ ಎಂದು ತಿಳಿಸಿದ್ದೇನೆ. ಅದಾದನಂತರ ಹದಿನಾರು ಪತ್ರಗಳನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಇಲಾಖೆಗೆ ಬರೆದಿದ್ದೇನೆ. ಇಲ್ಲಿ ಕಳಪೆ ಕೆಲಸವಾಗುತ್ತಿದೆ, ತಡೆಹಿಡಿಯಿರಿ ಎಂದು ಹೇಳಿದ್ದೇನೆ. ಅಲ್ಲಿ ಈಗಾಗಲೇ ಆರು ತಿಂಗಳಾಗಿದೆ ಸುಮಾರು 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇವತ್ತು ಮಾನ್ಯ ಮಂತ್ರಿಗಳು ಆ ಜಾಗಕ್ಕೆ ಹೋದರೂ ಕೂಡ ಈ ರಸ್ತೆಯನ್ನು 10 ವರ್ಷದಿಂದೀಚೆಗೆ ಯಾರೂ ಮಾಡಲಿಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ಅಷ್ಟು ಧೈರ್ಯ ನನಗೆ ಇದೆ. ಇಷ್ಟೆಲ್ಲಾ ಬರೆದರೂ ಕೂಡ ಮಾನ್ಯ ಮಂತ್ರಿಗಳ ಹತ್ತಿರ ಅಧಿಕಾರಿಗಳು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿಸುತ್ತಾರೆ. ಇವತ್ತಿನ 'ಪ್ರಜಾವಾಣಿ' ಪತ್ರಿಕೆಯಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಪುಟ್ಟಸ್ವಾಮಿಗೌಡರಿಗೆ ಒಂದು ಮಾತ ತಿಳಿಸಿದ್ದಾರೆ. ಹೇಮಾವತಿ ಬಗ್ಗೆ ವಿಚಾರಣೆಯನ್ನು ಮಾಡಿಸುತ್ತೇನೆ, ಐದನೇ ತಾರೀಖಿನಿಂದ ವಿಚಾರಣೆ ಪ್ರಾರಂಭವಾಗುತ್ತದೆ ಎಂದು ತಿಳಿಸಿದ್ದಾರೆ. ಇದಕ್ಕೆ ಸಣ್ಣ ವಿಚಾರಣೆಯಾದರೆ ಆಗುವುದಿಲ್ಲ. ಈ ವಿಚಾರವಾಗಿ ಹಿಂದೆ ಸದನದಲ್ಲಿ ಪ್ರಸ್ತಾಪ ಮಾಡಿದ್ದು, ಮಾನ್ಯ ಮಂತ್ರಿಗಳು ಆಗ ಹೇಳಿರುವುದನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಕೊನೆಗೆ ಮಾನ್ಯ ಮಂತ್ರಿಗಳು ಹಿಂದೆ ಎರಡು ಮಾತುಗಳನ್ನು ಹೇಳಿದ್ದಾರೆ ಅದೇನೆಂದರೆ, ''ನೀವು 2-3 ಸಲ ನನಗೆ ಹೇಳಿದ್ದೀರಿ, ನಮ್ಮ ಇಲಾಖೆಯಿಂದ ತಪ್ಪಾಗಿದೆ, ಅದರ ಬಗ್ಗೆ ನಾನು ತೀವ್ರವಾದಂತಹ ಕ್ರಮವನ್ನು

ತೆಗೆದುಕೊಳ್ಳುತ್ತೇನೆ, ಮತ್ತೆ ಇನ್ನೊಂದು ವಾರದಲ್ಲಿ ಫಲಿತಾಂಶ ಕೊಡುತ್ತೇನೆ '' ಎಂದು ಅವರು ನೀಡಿರುವ ಹೇಳಿಕೆಯಲ್ಲಿ ಇದೆ. ನಂತರ ಇನ್ನೊಂದು ಬಾರಿ ಮಾನ್ಯ ಕೆ.ಎನ್ ನಾಗೇಗೌಡರು ಏನು ಹೇಳುತ್ತಾರೆಂದರೆ,'' ನಾನು ಹೇಳುತ್ತಿದ್ದೇನೆ, ಇದು ಜೆನುಯಾನ್ ಕೇಸ್ ಇದೆ. ಸ್ವಲ್ಪ ನಮ್ಮ ಕಡೆಯಿಂದ ತಪ್ಪಾಗಿದೆ. ಅದನ್ನು ನಾನು ಅಕ್ಸೆಪ್ಟ್ ಮಾಡಿಕೊಂಡಿದ್ದೇನೆ.'' ಈ ರೀತಿ ಇದೇ ಸದನದಲ್ಲಿ ಚರ್ಚೆಯಾಗಿದೆ. ಇದರ ವಿಚಾರವಾಗಿ ನಾನು ಹತ್ತಾರು ಕಾಗದ ಬರೆದಿದ್ದೇನೆ. ಆದರೆ ಇವತ್ತು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅಲ್ಲದೆ ಮಧ್ಯದಲ್ಲಿ ನಾನು ಮತ್ತೆ ಪತ್ರ ಬರೆದಿದ್ದೇನೆ, ಬಿಲ್ ಆಗದೇ ಇದ್ದರೆ ತಡೆಹಿಡಿಯಿರಿ, ಬಿಲ್ ಕೊಡಬೇಡಿ, ಹಾಳಾಗಿರತಕ್ಕಂಥಾದ್ದನ್ನು ಸರಿಪಡಿಸಿದ ಮೇಲೆ ಬಿಲ್ ಕೊಡಿ ಎಂದು. ಆದರೆ ತಡೆಹಿಡಿದಿದ್ದೇವೆ ಎಂದು ಹೇಳುತ್ತಾರೆ. ನಿಮ್ಮ ಉತ್ತರವನ್ನು ನೋಡಿದರೆ ಪೇಮೆಂಟ್ ಪೂರ್ತಿಯಾಗಿದೆ. 4-5 ಲಕ್ಷ ರೂಪಾಯಿಗಳನ್ನು ಹಿಡಿದುಕೊಂಡಿ ದ್ದಾರೆ. ದಿನಾಂಕ 25-5-1998 ರಲ್ಲಿ ನಾನು ಅಂದಿನ ಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಅದರ ಕಾಪಿಯನ್ನು ತೆಗೆದುಕೊಂಡಿದ್ದೇನೆ. ಅದರ ಕಾಪಿಯನ್ನು ನೇರವಾಗಿ ಅಂದಿನ ಉಸ್ತುವಾರಿ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಏಕೆಂದರೆ ಈಗಿರತಕ್ಕಂಥ ಕಂಟ್ರಾಕ್ಟರ್ ಅಲ್ಲಿಯವರೇ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ತಮಗೆ ನಾನು ದಿನಾಂಕ :31.3.2000ರಂದು ಪತ್ರ ಬರೆದಿದ್ದೇನೆ. ಅದರ ಕಾಪಿ ಇಲ್ಲಿ ಇದೆ. ಅಷ್ಟೆಲ್ಲಾ ಆದರೂ ಕೂಡ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ.

ಅಧ್ಯಕ್ಷರು : ತಾವು ಅನುಭವಸ್ಥ ಹಿರಿಯ ಸದಸ್ಯರಿದ್ದೀರಿ, ತಾವು ಪ್ರಶ್ನೆ ಕೇಳಲಿಲ್ಲ. ಪ್ರಶ್ನೆ ಕೇಳಿ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ ಇವತ್ತಿನ ಮಂತ್ರಿಗಳಿಗೂ ಪತ್ರ ಬರೆದಿದ್ದೇನೆ. ಹತ್ತಾರು ಪತ್ರಗಳನ್ನು ಈ ವಿಚಾರವಾಗಿ ಬರೆದಿದ್ದೇನೆ. ಆದರೆ ಇವತ್ತು ಹೊಸದಾಗಿ ನಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳಿರಬೇಕಾದರೆ ಅಧಿಕಾರಿಗಳು ಈ ಕೆಲಸ ನಡೆಯುವಾಗ ನೋಡಿರಬೇಕು, ಸೂಪರ್‌ವೈಸ್ ಮಾಡಿರಬೇಕು. ಮಾನ್ಯ ಮುಖ್ಯಮಂತ್ರಿಗಳು ಏನು ತನಿಖೆಗೆ ಹಾಕಿದ್ದಾರೆ, ಅದೇರೀತಿ ಅವತ್ತು ಕೂಡ ಸಂಬಂಧಪಟ್ಟ ಮಂತ್ರಿಗಳು ವಿಜಿಲೆನ್ಸ್‌ನಿಂದ ತನಿಖೆ ನಡೆಸುತ್ತೇವೆ ಎಂದು ಹೇಳಿದ್ದಾರೆ. ಇದಕ್ಕೆ ಸರಿಯಾದ ಸದನ ಸಮಿತಿ ಮಾಡಿ. ಅಲ್ಲಿ ಆಗಬಾರದಂತಹ ಅವ್ಯವಹಾರಗಳು ನಡೆದಿದೆ, ಅಲ್ಲಿ ಯಾವಾಗ ಫೌಂಡೇಷನ್ ಹಾಕಲಿಕ್ಕೆ ಪ್ರಾರಂಭವಾಯಿತೋ ಅಂದಿನಿಂದ ಇಂದಿನವರೆಗೂ ಅಲ್ಲಿ ಏನು ಅಧಿಕಾರಿಗಳು 20-25 ವರ್ಷಗಳಿಂದ ಇದ್ದಾರೆ. ಅವರನ್ನು ಯಾರೂ ಮಾತನಾಡಿಸುವ ಹಾಗಿಲ್ಲ. ಸದನದ ಸಮಿತಿಯನ್ನಾದರೂ ಕಾನ್ಸಿಟ್ಯೂಟ್ ಮಾಡಿ ತನಿಖೆ ಮಾಡಿಸಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಹಿರಿಯ ಸದಸ್ಯರು ಕೆಲವಾರು ಮಾಹಿತಿಯನ್ನು ಸದನದ ಮೂಲಕ ನಮ್ಮ ಗಮನಕ್ಕೆ ತಂದಿದ್ದಾರೆ. ಪತ್ರವನ್ನು ಕಳುಹಿಸಿದ್ದಾರೆ ನಿಜ. ಈ ರಸ್ತೆ ಕೆಲಸಕ್ಕೆ ಸುಮಾರು 48.29 ಲಕ್ಷ ರೂಪಾಯಿಗಳು ಈಗಾಗಲೇ ಖರ್ಚಾಗಿದೆ ಎನ್ನುವುದನ್ನು ವರದಿಯಲ್ಲಿ ಹೇಳಿದೆ. ಇನ್ನು 11.23 ಲಕ್ಷ ರೂಪಾಯಿಗಳ ಕ್ಲೇಮ್ ಅವರು ಮಾಡಿರತಕ್ಕಂಥ ಬಾಕಿ ಇನ್ನೂ ಕೊಟ್ಟಿಲ್ಲ. ಒಂದು ಹಂತದಲ್ಲಿ ನಮ್ಮ ಮುಖ್ಯ ಇಂಜಿನಿಯರ್ ಹೋಗಿ ರಸ್ತೆಯ ಕೆಲಸವನ್ನು ಇನ್ಸ್‌ಪೆಕ್ಟ್ ಮಾಡಿದ್ದಾರೆ. ಅವರು ಗುಣಮಟ್ಟದ ಬಗ್ಗೆ ಪ್ರಸ್ತಾಪ ಮಾಡಿಲ್ಲ, ಅಲ್ಲಿ ಪಾಟ್-ಹೋಲ್ಸ್ ಇದೆ, ಅವುಗಳನ್ನು ತುಂಬಬೇಕು ಎಂದು ಅವರಿಗೆ ಸೂಚನೆ ಕೊಟ್ಟಿದ್ದರು. ನಂತರ ಎಕ್ಸಿಕ್ಯುಟೀವ್ ಇಂಜಿನಿಯರ್ ಯಾವ

ಗುತ್ತಿಗೆದಾರ ಕೆಲಸವನ್ನು ಮಾಡಿದ್ದನೋ ಅವನಿಗೆ ಆ ನ್ಯೂನ್ಯತೆಯನ್ನು ಸರಿಪಡಿಸಬೇಕು ಎಂದು ನೋಟೀಸ್ ಕೊಟ್ಟಿದ್ದಾರೆ. ಎಲ್ಲಿಯವರೆಗೆ ಈ ಕೆಲಸ ಸರಿಪಡಿಸುವುದಿಲ್ಲ ಅಲ್ಲಿಯವರೆಗೆ ಅವರಿಗೆ ಏನು ಫೈನಲ್ ಬಿಲ್ ಪಾವತಿ ಮಾಡಬೇಕು ಅದನ್ನು ಮಾಡಕೂಡದೆಂದು ಸರ್ಕಾರ ನಿರ್ದೇಶನ ಕೊಟ್ಟಿದೆ.

11.50 ಪಿ.ಎಂ.

ಇನ್ನು ಮಾನ್ಯ ಸದಸ್ಯರು ತನಿಖೆ ಮಾಡಿಸಬೇಕೆಂದು ಹೇಳಿದ್ದಾರೆ. ಈ ಕೆಲಸದಲ್ಲಿ ನಿಜವಾಗಿ ಬಹಳ ಕಳಪೆಯಾಗಿದ್ದರೆ ನಮ್ಮ ನೀರಾವರಿ ಇಲಾಖೆಯ ಜಾಗೃತ ದಳದ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ತನಿಖೆ ಮಾಡಿಸಿ ಅಲ್ಲಿಂದ ವರದಿ ಬರುವವರೆಗೂ ಬಾಕಿ ಬಿಲ್ ಏನಿದೆ ಅದನ್ನು ಕೊಡುವುದಿಲ್ಲ, ಆ ವರದಿ ಬಂದ ತಕ್ಷಣ ಸರ್ಕಾರ ನಿರ್ಣಯ ಮಾಡುತ್ತದೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಒಟ್ಟು 54.36 ಲಕ್ಷ ರೂಪಾಯಿಗಳ ಅಂದಾಜು ಇದ್ದು, ಅದರಲ್ಲಿ 48.29 ಲಕ್ಷ ರೂಪಾಯಿಗಳು ಖರ್ಚು ಆಗಿರುವಂಥಾದ್ದು. ಇನ್ನು ಆರು ಲಕ್ಷ ರೂಪಾಯಿಗಳು ಮಾತ್ರ ಉಳಿಯುತ್ತದೆ, ಅವರು ಹೆಚ್ಚಿಗೆ ಖರ್ಚು ಮಾಡಿರಬಹುದು. ಈ ಕೆಲಸ ಕಳೆದ ನವೆಂಬರ್ ತಿಂಗಳಿನಿಂದ ಪ್ರಾರಂಭವಾಗಿದೆ. ತಾವು ಇವತ್ತು ಯಾರನ್ನಾದರೂ ಅಲ್ಲಿಗೆ ಕಳುಹಿಸಿ, ಅಲ್ಲಿ ರಸ್ತೆ ಸಮರ್ಪಕವಾಗಿದೆ ಎಂದರೆ ನಾನು ಅಡ್ಡ ಬರುವುದಿಲ್ಲ. ಇನ್ನು ಉಳಿದ ಆರು ಲಕ್ಷ ರೂಪಾಯಿಗಳಲ್ಲಿ ರಸ್ತೆ ಮಾಡುವುದಕ್ಕಾಗುವುದಿಲ್ಲ. ಅಲ್ಲಿ 49,50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಎಂಟು ಕಿ.ಮೀ. ರಸ್ತೆಯನ್ನು ಸರಿಯಾಗಿ ಮಾಡಿಲ್ಲವೆಂದರೆ ಹೇಗೆ? ಈ ರಸ್ತೆಯನ್ನು ಮುಳುಗಡೆಯಾಗಿರುವಂತಹ ಜನರಿಗಾಗಿ ಮಾಡಿರುವಂಥಾದ್ದು. ಇವತ್ತು ಯಾರು ತಮ್ಮ ಸರ್ವಸ್ವವನ್ನು ಕಳೆದುಕೊಂಡು, ಮನೆಮಠಗಳನ್ನು ಕಳೆದು ಕೊಂಡಿದ್ದಾರೋ ಅವರಿಗೆ ರಸ್ತೆಯನ್ನು ಕಲ್ಪಿಸುವಂಥಾದ್ದು ಆಗಿದೆ. ಆ ಮುಳುಗಡೆಯಾಗಿರುವಂತಹ ಜಾಗದಲ್ಲಿ ಪುನರ್ವಸತಿಯನ್ನು ಮಾಡಬೇಕು, ತಾವು ಅದನ್ನು ಮಾಡಲಿಲ್ಲ, ರಸ್ತೆಯನ್ನು ಕೊಡಿ ಎಂದು ಹೇಳಿದರೂ, ಅದಕ್ಕೆ 59 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹತ್ತು ಕಿ.ಮೀ. ರಸ್ತೆಯನ್ನು ಮಾಡುವುದಾಕ್ಕಾಗಲಿಲ್ಲವೆಂದರೆ ಹೇಗೆ? ಇದನ್ನು ತನಿಖೆ ಮಾಡಿಸಬೇಕು. ಕಳೆದ ಸಾರಿಯೂ ಮಾನ್ಯ ಮಂತ್ರಿಯವರು ಇದೇ ಮಾತನ್ನು ಹೇಳಿದ್ದರು. ಅವರು ಜಾಗೃತ ದಳದವರನ್ನು ಕಳುಹಿಸಿ ತೋರಿಸುತ್ತೇವೆಂದು ಹೇಳಿದರು, ಅದು ಆಗಲಿಲ್ಲ. ಅದು ಆಗುವುದ ರೊಳಗೆ ಬಿಲ್ ಪಾಸ್ ಆಗಿಹೋಯಿತು. ಈ ಸಾರಿ ತಾವಾದರೂ ಅದನ್ನು ತೆಗೆಸಿಕೊಂಡು ಸರಿಪಡಿಸ ಬೇಕು.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ಮಾನ್ಯ ಅಧ್ಯಕ್ಷ . ಇಲ್ಲಿ ಯಾರು ಕಂಟ್ರಾಕ್ಟ್‌ದಾರರು ಇದ್ದಾರೆ, ಅವರನ್ನು ಬ್ಲಾಕ್ ಲಿಸ್ಟ್‌ಗೆ ಹಾಕಬೇಕು, ಇದು ತಮ್ಮ ಕಾಲದಲ್ಲಿ ಆಗಬೇಕೆಂದು ವಿನಂತಿ ಸಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಪ್ರಕಾರ ರಸ್ತೆ ಕೆಲಸ ಮಾಡಿದರೆ ಪಾರ್ಟಹೋಲ್ಸ್ ಬಂದಿವೆ ಎಂದು ಹೇಳುತ್ತೀರಿ, ಇವತ್ತು ರಸ್ತೆ ಕೆಲಸ ಮಾಡುತ್ತಾರೆ, ನಾಳೆ ಅಲ್ಲಿ ಪಾಟ್ ಹೋಲ್ಸ್ ಬೀಳುತ್ತದೆ. ನಿಮ್ಮ ಪಿ.ಡಬ್ಲ್ಯೂ.ಡಿ. ಕೋಡ್ ಪ್ರಕಾರ ಆ ರಸ್ತೆ ಎಷ್ಟು ವರ್ಷಗಳು ಸರಿಯಾಗಿ ಇರಬೇಕು, ಮತ್ತೆ ಆಪಾಟ್-ಹೋಲ್ಸ್‌ನಿಂದ ಸಬ್‌ಸ್ಟ್ಯಾಂಡರ್ಡ್ ಕೆಲಸವೆನ್ನುವಂಥಾದ್ದು ಸಾಬೀತು ಆಗಿದೆ. ಅದಕ್ಕೆ ನೀವು ಮತ್ತೆ ಇಲ್ಲಿಂದ ಪುನಃ ಅಧಿಕಾರಿಗಳನ್ನು ಕಳುಹಿಸುವಂತಹ ಅವಶ್ಯಕತೆ ಇಲ್ಲ. ಈ ರೀತಿಯಾಗಿ ಸಬ್‌ಸ್ಟ್ಯಾಂಡರ್ಡ್ ಕೆಲಸ ಮಾಡಿರುವಂತಹ ಅಧಿಕಾರಿಗಳು ಯಾರಿದ್ದಾರೆ,

ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಿಮತ್ತೆ ಇದಕ್ಕೆ ಫೈನಲ್ ಪೇಮೆಂಟ್ ಬಗ್ಗೆ ವಿತ್-ಹೆಲ್ಡ್ ಮಾಡಿದ್ದೀರಿ. ತಾವು ಆ ಅಧಿಕಾರಿಗಳ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೀರಾ? ನಿಮ್ಮ ಪಿ.ಡಬ್ಲ್ಯೂ.ಡಿ. ಕೋಡ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಹೆಚ್.ಕೆ ಪಾಟೀಲ್ : ಮಾನ್ಯ ಬಿ.ಬಿ. ಶಿವಪ್ಪನವರು ಹೇಳಿದ ಹಾಗೆ ಈ ರಸ್ತೆ ಗುಣಮಟ್ಟದ ಬಗ್ಗೆ ತನಿಖೆ ಮಾಡುವುದಕ್ಕೆ ನಮ್ಮ ಇಲಾಖೆಯ ಜಾಗೃತ ದಳ ಸಮಿತಿಯನ್ನು ಕಳುಹಿಸುತ್ತೇವೆ. ಮಾನ್ಯ ಬೈರೇಗೌಡರು ಹೇಳಿದ ಪಾಟ್-ಹೋಲ್ಸ್ ಬಗ್ಗೆ ಅದು ಕಳಪೆ ಕೆಲಸವೆಂದು ಗೊತ್ತಾದ ಮೇಲೆ ಏಕೆ ಕ್ರಮ ತೆಗೆದುಕೊಳ್ಳಬಾರದೆಂದು ಕೇಳಿದ್ದಾರೆ. ಈ ಬಗ್ಗೆ ನಾವು ಒಂದು ಪ್ರೊಸೀಜರ್ ಫಾಲೋ ಮಾಡಬೇಕು, ಕೆಲವು ಸಂದರ್ಭಗಳಲ್ಲಿ ಪಾಟ್-ಹೋಲ್ಸ್ ಮಳೆಯಿಂದಲೂ ಬಂದಿರುವ ಸಾಧ್ಯತೆಗಳು ಇರುತ್ತದೆ, ಅದು ಏನೆಂಬುದು ಗೊತ್ತಿಲ್ಲ. ಈಗ ನಾವು ಊಹೆಗೆ ಒಳಪಡು ವುದು ಬೇಡ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ರಸ್ತೆ ಮಾಡುವಂಥಾದ್ದು ಮಳೆ ಬಂದರೆ ಕೊಚ್ಚಿಕೊಂಡು ಹೋಗುವುದಕ್ಕಲ್ಲ, ದಯಮಾಡಿ ಅದನ್ನು ತಾವು ಅರ್ಥ ಮಾಡಿಕೊಳ್ಳಿ.

ಶ್ರೀ ಹೆಚ್.ಕೆ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಪಾಟ್-ಹೋಲ್ಸ್ ಎಂದರೆ ಕೊಚ್ಚಿಕೊಂಡು ಹೋದ ಹಾಗೆ ಅಲ್ಲ, ಅದು ಯಾರೇ ಮಾಡಿರಲಿ, ಎಲ್ಲಿಯೇ ಮಾಡಿರಲಿ, ನಮ್ಮ ಹತ್ತಿರ ಇರುವ ವರದಿ ಪ್ರಕಾರ ಮಾನ್ಯ ಬಿ.ಬಿ. ಶಿವಪ್ಪನವರು ಹೇಳಿದಹಾಗೆ ಅತ್ಯಂತ ಕಳಪೆ ಗುಮಣಟ್ಟದ ಕೆಲಸವನ್ನು ಮಾಡಿದ್ದಾರೆಂದು ಹೇಳಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡಿಸುತ್ತೇವೆ. ಇನ್ನು ನಾವು ಈಗಾಗಲೇಲ ಹೇಳಿದ ಹಾಗೆ ಕೊನೆಯ ಬಿಲ್ ತಯಾರು ಮಾಡುವಂಥಾದ್ದನ್ನು ನಿಲ್ಲಿಸಲಾಗಿದೆ. ಅದು ಕಳಪೆ ಕೆಲಸವೆನ್ನುವ ವರದಿ ಬಂದರೆ ಯಾವ ಗುತ್ತಿಗೆದಾರರ ಮೇಲೆ ಕ್ರಮ ತೆಗೆದುಕೊಳ್ಳ ಬೇಕೋ, ಯಾವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ನಾವು ತೆಗೆದುಕೊಳ್ಳತ್ತೇವೆ.

ಕೊಪ್ಪಳ ಜಿಲ್ಲೆಯಲ್ಲಿ ದರೋಡೆ, ಸುಲಿಗೆ ಹಾಗೂ ಸಂಶಯಾಸ್ಪದ ಸಾವುಗಳ ಕುರಿತು

239 (2513) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999-2000ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ದರೋಡೆ ಸುಲಿಗೆ ಸಂಶಯಾಸ್ಪದ ಸಾವುಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಸರ್ಕಾರದ ಇದನ್ನು ತಡೆಯಲು ಯಾವ ಕ್ರಮ ಕೈಗೊಂಡಿದೆ ಮತ್ತು ಸದರಿ ಸಾಲಿನಲ್ಲಿ ದರೋಡೆ, ಸುಲಿಗೆ ಹಾಗೂ ಸಾವುಗಳು ಎಷ್ಟು ನಡೆದಿದೆ? (ವಿವರವನ್ನು ಒದಗಿಸುವುದು)

ಆ) ಸದರಿ ದರೋಡೆ ಸುಲಿಗೆ ಸಂಶಯಾಸ್ಪದ ಸಾವುಗಳಿಗೆ ಹೊರ ರಾಜ್ಯದ ಮಾಫೀಯಾ ಗುಂಪಿನ ಕೈವಾಡವೇನಾದರೂ ಇದೆಯೇ ಇದ್ದರೆ ಇಲಾಖೆ ಕೈಗೊಂಡ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಬಂದಿದೆ, ವಿವರಗಳು ಈ ಕೆಳಕಂಡಂತಿವೆ :